
# ಜಾತ್ರೆ

ಬಣ್ಣ ಬಣ್ಣದ ಪುಗ್ಗೆ ಪೌಜು
ತೊಟ್ಟಿಲ ಗಿರಕಿ, ಪೀಪಳಿ ಸದ್ದು,
ತೆರಪಿಲ್ಲದೆ ತಿರುಗೋ ಜನ... ಜನ...
ನೂಕು ನುಗ್ಗಲು...
ನೀನಿಲ್ಲದೆಯೂ ನಗೊ ಗೊಂಬೆಗೆ
ಕೀಲಿ ಕೊಟ್ಟವರ್‍ಯಾರೇ?
ಗೌಜಿನಲಿ ಕಳೆದಷ್ಟೂ
ನಿಶ್ಯಬ್ದ ತಾಕುತಿದೆ!

*

ಇಲ್ಯಾರೂ ಈಗ ಪೀಪಳಿ ಕೊಳ್ಳುತ್ತಿಲ್ಲ,
ಮಿಠಾಯಿ ಅಂಗಡಿಗೂ ಜನರಿಲ್ಲ;
ಕಿಸೆ ತುಂಬಿದೆಯಷ್ಟೇ
ಕನಸುಗಳು ಖಾಲಿ... ಖಾಲಿ...

*



ಬಾ... ಮಗಳೇ,
ಹೊಳೆವ ಪುಟ್ಟ ಬಳೆಗಳ
ಜೋಳಿಗೆಗೆ ತುಂಬು;
ಊದೂದಿ ಸಾಕಾದ ಪೀಪಳಿಯ
ಈ ಕಿಸೆಯಲ್ಲೇ ತುರುಕು
ಅಲೆದು ಸುಸ್ತಾಗಿ ಹೆಗಲೇರು
ಮಿಠಾಯಿ ಕೊಡಿಸೆಂದು ಹಟಮಾಡು...

ನಿನ್ನ ಅಂಟಂಟು ಕೈಗಳು
ನನ್ನಂಗಿಗಂಟುವ ನಂಟು ಮುಗಿಯಿತೇ?

*

ಜೀವ ಜಾತ್ರೆಗೆಷ್ಟು ತೊಟ್ಟಿಲೋ?
ಎಷ್ಟು ಗಿರಕಿಯೋ?
ಕೊನೇ ಪಕ್ಷ,
ನನ್ನುಸಿರನೂದಿ ಹಿಗ್ಗಿಸಿದ
ಪುಗ್ಗೆಗಳನಾದರೂ ಕೊಂಡುಕೋ ಮಗಳೇ...

• ಚೈತ್ರಿಕಾ ಹೆಗಡೆ